# 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ. ನಂ.4352/2024

| | | |
|---|---|---|
| ಫಿರ್ಯಾದಿದಾರರು | : | ರಾಜ್ಯ ಸರ್ಕಾರದ ಪರವಾಗಿ ಸಿದ್ದಾಪುರ ಆರಕ್ಷಕ ಠಾಣೆ |
| | | - **ವಿರುದ್ಧ** - |
| ಆರೋಪಿಗಳು | : | 1. ಶ್ರೀ ದರ್ಶನ್.ಹೆಚ್.ಪಿ. 23 ವರ್ಷ<br>ಬಿನ್. ಪುಟ್ಟ ನಾಯಕ,<br>ವಾಸಃ ನಂ.207/208, ಶ್ರೀನಿವಾಸ ಹೌಸ್,<br>3ನೇ ಕ್ರಾಸ್, 9ನೇ ಮೇನ್,<br>ವಿದ್ಯಾಪೀಠ ಲೇಔಟ್, ಬೆಂಗಳೂರು.<br><br>2. ಶ್ರೀ ಕಿರಣ್.ಸಿ. 22 ವರ್ಷ<br>ಬಿನ್. ಚಂದ್ರ,<br>ವಾಸಃ ನಂ.64/1, ಎಪಿಕೆ ರಸ್ತೆ,<br>ತ್ಯಾಗರಾಜನಗರ, ಬೆಂಗಳೂರು ನಗರ. |

## ದೋಷಾರೋಪಣೆ

ಶ್ರೀ. **ಕೇಶವಮೂರ್ತಿ.ಬಿ., ಬಿ.ಎ. ಎಲ್.ಎಲ್.ಬಿ.,** 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿ ಆದ ನಾನು ಆರೋಪಿಗಳಾದ ನಿಮ್ಮಗಳ ಮೇಲೆ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೋರಿಸಿದ್ದೇನೆ.

ಮೊದಲನೇಯದಾಗಿ, ಬೆಂಗಳೂರು ನಗರ, ಸಿದ್ದಾಪುರ ಪೊಲೀಸ್ ಠಾಣಾ ಸರಹದ್ದು ಜಯನಗರ 1ನೇ ಬ್ಲಾಕ್, 4ನೇ ಕ್ರಾಸ್, ಅಶೋಕ ಪಿಲ್ಲರ್ ಹತ್ತಿರ ನಂ.15/16 ರಲ್ಲಿರುವ ಟಚ್ ಸ್ಟೋನ್ ಎಂಟರ್ ಪ್ರೈಸಸ್ ಪ್ರೈ. ಲಿ. ಕಂಪನಿಯಲ್ಲಿ ಸಾಕ್ಷಿ-1 ರವರು ಚೀಫ್ ಆಪ್ ರೇಟಿಂಗ್ ಆಫೀಸರ್ ಆಗಿ ಕೆಲಸ ಮಾಡಿಕೊಂಡಿದ್ದು, ಸಾಕ್ಷಿ-1 ರವರು ನಡೆಸಿಕೊಂಡು ಹೋಗುತ್ತಿರುವ

ಕಂಪನಿಯಲ್ಲಿ Rewards By Offineeds ಎಂಬ ಪೋರ್ಟಲ್ ನಲ್ಲಿ ಕಂಪನಿಯ ಗ್ರಾಹಕರಿಗೆ ಖರೀದಿಸಲು ಗಿಫ್ಟ್ ವೋಚರ್ ಗಳನ್ನು ವಿವಿದ ಮುಖ ಬೆಲೆಯ ಮೊತ್ತಕ್ಕೆ ಆಯ್ಕೆ ಮಾಡುವ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದು, ಸದರಿ ರಿವಾರ್ಡ್ ಪೋರ್ಟಲ್ ನಲ್ಲಿ ಸುಮಾರು 200 ವಿವಿಧ ಬಗೆಯ ಬ್ರಾಂಡ್ ಗಳು ಲಭ್ಯವಿದ್ದು, ಸದರಿ ಗಿಫ್ಟ್ ವೋಚರ್ ಗಳನ್ನು ದಿನಾಂಕ 08-10-2022 ರಿಂದ 07-04-2023 ರವರೆಗೆ ಗ್ರಾಹಕರಿಗೆ ಒದಗಿಸಿದ್ದು, ಸದರಿ ಕೋಡ್ ಗಳು ಇಂಗ್ಲೀಷ್ ಮತ್ತು ನಂಬರ್ ಗಳನ್ನು ಹೊಂದಿದ್ದು, ಗಿಫ್ಟ್ ಕಾರ್ಡ್ ಗಳನ್ನು ಪ್ರಿಂಟ್ ಮಾಡಿಸಿ ಗ್ರಾಹಕರಿಗೆ ಕಳುಹಿಸಿ ಕೊಡಲಾಗುತ್ತಿದ್ದು, ಗಿಫ್ಟ್ ವೋಚರ್ ಗಳನ್ನು ಪ್ರಿಂಟ್ ಮಾಡಿಸಲು 1ನೇ ಆರೋಪಿಯಾದ ನಿಮಗೆ ನೀಡಿ ಪ್ರಿಂಟ್ ಗಾಗಿ ಪ್ರೆಸ್ ಗೆ ಕಳುಹಿಸುತ್ತಿದ್ದು, ನೀವು ಸದರಿ ವೋಚರ್ ಗಳನ್ನು 2ನೇ ಆರೋಪಿಯಾದ ನಿಮ್ಮ ಬಳಿ  ಪ್ರಿಂಟ್ ಮಾಡಿಸಿ ಗಿಫ್ಟ್ ವೋಚರ್ ನಲ್ಲಿರುವ ಕೋಡ್ ಗಳನ್ನು ಸೀಲ್ ಮಾಡುವ ಮೊದಲೇ ನಿಮ್ಮ ಮೊಬೈಲ್ ನಲ್ಲಿ ಫೋಟೋ ತೆಗೆದುಕೊಂಡು ಆರೋಪಿಗಳಾದ ನೀವುಗಳು ಕಂಪನಿಯ ಗಿಫ್ಟ್ ವೋಚರ್ ನಲ್ಲಿರುವ ಕೋಡ್ ನ್ನು ಬಳಸಿಕೊಂಡು ಅಮೆಜಾನ್, ಫ್ಲಿಪ್ ಕಾರ್ಟ್ ನಲ್ಲಿ ಶೂ, ಚಪ್ಪಲಿ, ಮೊಬೈಲ್ ಫೋನ್, ವಾಚ್, ಇತರೆ ವಸ್ತುಗಳು, ಕಲ್ಯಾಣ್ ಜುವೆಲರ್ಸ್ ನಲ್ಲಿ ಚಿನ್ನದ ಸರ ಹಾಗೂ ಇತರೆ ವಸ್ತುಗಳನ್ನು ಖರೀದಿ ಮಾಡಿ ಗಿಫ್ಟ್ ವೋಚರ್ ನಲ್ಲಿರುವ ಕೋಡ್ ಗಳನ್ನು ಸಾಕ್ಷಿ-3 ರವರಿಗೆ ಮಾರಾಟ ಮಾಡಿ ಸಾಕ್ಷಿ-3 ರವರಿಂದ ಹಣ ಪಡೆದು ಗಿಫ್ಟ್ ವೋಚರ್ ನಲ್ಲಿರುವ ಕೋಡ್ ಗಳನ್ನು ದುರ್ಬಳಕೆ ಮಾಡಿ ಟಚ್ ಸ್ಟೋನ್ ಎಂಟರ್ ಪ್ರೈಸಸ್ ಪ್ರೈ. ಲಿ. ಕಂಪನಿಗೆ ಅಪರಾಧಿಕ ನಂಬಿಕೆ ದ್ರೋಹ ಮಾಡಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ 408 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ಮತ್ತು

ಎರಡನೆಯದಾಗಿ, ಆರೋಪಿಗಳಾದ ನೀವುಗಳು ಕಂಪನಿಯ ಗಿಫ್ಟ್ ವೋಚರ್ ನಲ್ಲಿರುವ ಕೋಡ್ ನ್ನು ಬಳಸಿಕೊಂಡು ಅಮೆಜಾನ್, ಫ್ಲಿಪ್ ಕಾರ್ಟ್ ನಲ್ಲಿ ಶೂ, ಚಪ್ಪಲಿ, ಮೊಬೈಲ್ ಫೋನ್, ವಾಚ್, ಇತರೆ ವಸ್ತುಗಳು, ಕಲ್ಯಾಣ್ ಜುವೆಲರ್ಸ್ ನಲ್ಲಿ ಚಿನ್ನದ ಸರ

ಹಾಗೂ ಇತರೆ ವಸ್ತುಗಳನ್ನು ಖರೀದಿ ಮಾಡಿ ಗಿಫ್ಟ್ ವೋಚರ್ ನಲ್ಲಿರುವ ಕೋಡ್ ಗಳನ್ನು ಸಾಕ್ಷಿ-3 ರವರಿಗೆ ಮಾರಾಟ ಮಾಡಿ ಸಾಕ್ಷಿ-3 ರವರಿಂದ ಹಣ ಪಡೆದು ಗಿಫ್ಟ್ ವೋಚರ್ ನಲ್ಲಿರುವ ಕೋಡ್ ಗಳನ್ನು ದುರ್ಬಳಕೆ ಮಾಡಿ ಟಚ್ ಸ್ಟೋನ್ ಎಂಟರ್ ಪ್ರೈಸಸ್ ಪ್ರೈ. ಲಿ. ಕಂಪನಿಗೆ ಅಪರಾಧಿಕ ನಂಬಿಕೆ ದ್ರೋಹವೆಸಗಿ 1,94,540/- ರೂ. ಗಳನ್ನು ಮೋಸ ಮಾಡಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ.420 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ಆಪಾದಿಸುತ್ತೇನೆ.

ಕೊನೆಯದಾಗಿ, ಆರೋಪಿಗಳಾದ ನೀವುಗಳು ಕಂಪನಿಯ ಗಿಫ್ಟ್ ವೋಚರ್ ನಲ್ಲಿರುವ ಕೋಡ್ ನ್ನು ಬಳಸಿಕೊಂಡು ಅಮೆಜಾನ್, ಫ್ಲಿಪ್ ಕಾರ್ಟ್ ನಲ್ಲಿ ಶೂ, ಚಪ್ಪಲಿ, ಮೊಬೈಲ್ ಫೋನ್, ವಾಚ್, ಇತರೆ ವಸ್ತುಗಳು, ಕಲ್ಯಾಣ್ ಜುವೆಲರ್ಸ್ ನಲ್ಲಿ ಚಿನ್ನದ ಸರ ಹಾಗೂ ಇತರೆ ವಸ್ತುಗಳನ್ನು ಖರೀದಿ ಮಾಡಿ ಗಿಫ್ಟ್ ವೋಚರ್ ನಲ್ಲಿರುವ ಕೋಡ್ ಗಳನ್ನು ಸಾಕ್ಷಿ-3 ರವರಿಗೆ ಮಾರಾಟ ಮಾಡಿ ಸಾಕ್ಷಿ-3 ರವರಿಂದ ಹಣ ಪಡೆದು ಗಿಫ್ಟ್ ವೋಚರ್ ನಲ್ಲಿರುವ ಕೋಡ್ ಗಳನ್ನು ದುರ್ಬಳಕೆ ಮಾಡಿ ಸರ್ಕಾರಕ್ಕೆ ಮೋಸ ಮಾಡುವ ಅಥವಾ ಅಪ್ರಮಾಣಿಕವಾಗಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ.66(ಸಿ) ಮತ್ತು 66(ಡಿ) ಆಕ್ಟ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ಆಪಾದಿಸುತ್ತೇನೆ.

ಈ ಮೇಲ್ಕಂಡ ಆಪಾದನೆಗಳ ಬಗ್ಗೆ ಆರೋಪಿಯಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

ದಿನಾಂಕಃ 24.04.2025

ಬೆಂಗಳೂರು. 4ನೇ ಹೆ ಮು ನ್ಯಾ ದಂಡಾಧಿಕಾರಿ.

# 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ. ನಂ.4352/2024

ಫಿರ್ಯಾದಿದಾರರು : ರಾಜ್ಯ ಸರ್ಕಾರದ ಪರವಾಗಿ ಸಿದ್ದಾಪುರ ಆರಕ್ಷಕ ಠಾಣೆ

- **ವಿರುದ್ಧ** -

ಆರೋಪಿಗಳು : 1. ಶ್ರೀ ದರ್ಶನ್.ಹೆಚ್.ಪಿ. 23 ವರ್ಷ
ಬಿನ್. ಪುಟ್ಟ ನಾಯಕ,

## ಆರೋಪಣೆ

ಪ್ರಶ್ನೆ 1) ನಿಮಗೆ ಓದಿ ವಿವರಿಸಿ ಹೇಳಿದ ಆರೋಪಣೆ ತಿಳಿಯಿತೆ ?

ಉತ್ತರಃ

ಪ್ರಶ್ನೆ 2) ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಇಲ್ಲವೇ ವಿಚಾರಣೆಯಾಗ ಬಯಸುವಿರಾ ?

ಉತ್ತರಃ

ದೋಷಾರೋಪಣೆಯನ್ನು ಅರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ ನಂತರ ಅವರು ನೀಡಿದ ಉತ್ತರಗಳನ್ನು ಸರಿಯಾಗಿ ಬರೆದುಕೊಂಡಿರುವೆನೆಂದು ದೃಢೀಕರಿಸುತ್ತೇನೆ.

ದಿನಾಂಕಃ 24.04.2025

ಬೆಂಗಳೂರು. 4ನೇ ಹೆ ಮು ನ್ಯಾ ದಂಡಾಧಿಕಾರಿ.

# 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ. ನಂ.4352/2024

ಫಿರ್ಯಾದಿದಾರರು : ರಾಜ್ಯ ಸರ್ಕಾರದ ಪರವಾಗಿ ಸಿದ್ದಾಪುರ ಆರಕ್ಷಕ ಠಾಣೆ

- **ವಿರುದ್ಧ** -

ಆರೋಪಿಗಳು : 2. ಶ್ರೀ ಕಿರಣ್.ಸಿ. 22 ವರ್ಷ
ಬಿನ್. ಚಂದ್ರ,

## ಆರೋಪಣೆ

ಪ್ರಶ್ನೆ 1) ನಿಮಗೆ ಓದಿ ವಿವರಿಸಿ ಹೇಳಿದ ಆರೋಪಣೆ ತಿಳಿಯಿತೆ ?

ಉತ್ತರಃ

ಪ್ರಶ್ನೆ 2) ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಇಲ್ಲವೇ ವಿಚಾರಣೆಯಾಗ ಬಯಸುವಿರಾ ?

ಉತ್ತರಃ

ದೋಷಾರೋಪಣೆಯನ್ನು ಅರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ ನಂತರ ಅವರು ನೀಡಿದ ಉತ್ತರಗಳನ್ನು ಸರಿಯಾಗಿ ಬರೆದುಕೊಂಡಿರುವೆನೆಂದು ದೃಢೀಕರಿಸುತ್ತೇನೆ.

ದಿನಾಂಕಃ 24.04.2025

ಬೆಂಗಳೂರು. 4ನೇ ಹೆ ಮು ನ್ಯಾ ದಂಡಾಧಿಕಾರಿ.